Cement Factory in Hosadurga Taluk. (Survey to start)

Q.—730. Sri G. BASAPPA (Hosadurga).—

Will the Government be pleased to state :—

(*a*) whether any survey was conducted in Hosadurga Taluk to examine the possibility of starting a cement factory : if so when ;

(*b*) what opinion was given after the survey was conducted ;

(*c*) whether it is a fact that all the required materials are easily available ?

A.—Sri H. SIDDAVEERAPPA (Minister for Home and Industries).—

(*a*) Yes ; preliminary surveys have been conducted by the Department of Geology during the period 1948-50.

(*b*) Preliminary exploration survey has revealed that about 10-15 million tons of limestone could be had in the area comprising of Kanchipura including Kellodu village, Madadkere and Marikanave.

(*c*) Not all.

ಶ್ರೀ ಜಿ. ಬಸಪ್ಪ.—(c) ಪ್ರಶ್ನೆಗೆ ಉತ್ತರವಾಗಿ 'Not all' ಎಂದು ಹೇಳಿದ್ದೀರಿ. ಹಾಗಾದರೆ ಅದಕ್ಕೆ ಬೇಕಾಗತಕ್ಕ raw materials ಯಾವ ಯಾವವು, ಸ್ವಾಮಿ ?

ಶ್ರೀ ಎಚ್. ಸಿದ್ದವೀರಪ್ಪ.—ಮುಖ್ಯವಾಗಿ ಬೇಕಾಗಿರುವ raw materials ಯಾವ ಯಾವವು ಎಂದರೆ Calcium (lime stone), clay and gypsum. ಈ ಮೂರರಲ್ಲಿ ಜಿಪ್ಸಂ ನಮ್ಮ ದೇಶದಲ್ಲಿ ಇಲ್ಲ. ಯಾವಾಗಲೂ ಅದನ್ನು ಇಂಪೋರ್ಟ್ ಮಾಡಿಕೊಳ್ಳುತ್ತೇವೆ. ಕ್ಯಾಲ್ಷಿಯಂ-ಲೈಂಸ್ಟೋನ್ನು ಮತ್ತು clay ಇವೆರಡೂ ಇವೆ.

ಶ್ರೀ ಜಿ. ಬಸಪ್ಪ.—ಜಿಪ್ಸಂ ಹೊರಗಡೆಯಿಂದ ತರಿಸಿ ತಾನೆ ಈಗ ಸಿಮೆಂಟ್ ತಯಾರುಮಾಡುತ್ತಾ ಇರುವುದು ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು. ಆಗಲೇ ಹೇಳಿದೆ.

ಶ್ರೀ ಜಿ. ಬಸಪ್ಪ.—ಅದಲ್ಲದೆ ಇನ್ನೇನೇನು ಸೌಕರ್ಯಬೇಕೋ ಅದೆಲ್ಲಾ ಆಲ್ಲಿದೆ.

ಶ್ರೀ ಎಚ್. ಸಿದ್ದವೀರಪ್ಪ.—Raw materials ಸೌಕರ್ಯ ಒಂದೇ ಸಾಲದು. ಅದು ಕೈಗಾರಿಕಾ ಕೇಂದ್ರವಾಗಿರಬೇಕು. ರೈಲ್ವೆ headಗೆ ಹತ್ತಿರ ಇರಬೇಕು. Moreover ನಮ್ಮಲ್ಲಿ ಸಿಮೆಂಟ್ ಮ್ಯಾನ್ಯುಫ್ಯಾಕ್ಚರ್ ಮಾಡಿದರೆ ಮಾರ್ಕೆಟ್ ಇದೆಯೇ ಇಲ್ಲವೇ ಎಂಬುದನ್ನು ನೋಡಬೇಕು. ಗವರ್ನ್‌ಮೆಂಟ್ ಆಫ್ ಇಂಡಿಯಾ ನೋಟಿಫಿಕೇಷನ್ ಪ್ರಕಾರ 1955-56ರಲ್ಲಿ ನಮ್ಮ ದೇಶಕ್ಕಾಗಿ ಉಳಿಯುವಷ್ಟು ಸಿಮೆಂಟ್ ಮ್ಯಾನ್ಯುಫ್ಯಾಕ್ಚರ್ ಆಗುತ್ತದೆ ಎಂಬ ಒಂದು ಸ್ಕೀಂ ಇದೆ. ಇದನ್ನೆಲ್ಲಾ ನೋಡಬೇಕು.

ಶ್ರೀ ಜಿ. ಬಸಪ್ಪ.—ಈಗಿರತಕ್ಕ ಫ್ಯಾಕ್ಟರಿಗಳಲ್ಲೇ ಅಷ್ಟು ಹೆಚ್ಚು ಉತ್ಪನ್ನ ಆಗುತ್ತದೆ ಎಂತಲೇ ಅಥವಾ ಹೊಸದಾಗಿ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಿದರೆ ಆ ರೀತಿ ಆಗುತ್ತದೆ ಎಂದು ಸ್ಕೀಮು ಇದೆಯೇ ?

ಶ್ರೀ ಎಚ್. ಸಿದ್ದವೀರಪ್ಪ.—ಪಂಚವಾರ್ಷಿಕ ಯೋಜನೆ ಪ್ರಕಾರ ಕಾರ್ಯಕ್ರಮ ನಡೆದಾಗ ಆ ವರ್ಷದಲ್ಲಿ ಸಿಮೆಂಟು ಅಷ್ಟು ಮ್ಯಾನುಫ್ಯಾಕ್ಚರ್ ಆಗಿ ಉಳಿಯುವಷ್ಟು ಆಗುತ್ತದೆ. Self-sufficient ಆಗುತ್ತದೆ ಎಂದು ವರದಿಯಾಗಿದೆ.

ಶ್ರೀ ಜಿ. ಬಸಪ್ಪ.—ಪ್ರಿಲಿಮಿನರಿ ಸರ್ವೇಗೆ ಎಷ್ಟು ದುಡ್ಡು ಖರ್ಚಾಯಿತು ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಜಿ. ಬಸಪ್ಪ.—ಮುಂದೆ ಕೇಂದ್ರ ಸರ್ಕಾರ ದೊಡನೆ ವ್ಯವಹಾರ ನಡೆಸಿ ಇಲ್ಲಿ ಸಿಮೆಂಟ್ ಫ್ಯಾಕ್ಟರಿಯನ್ನು ತೆಗೆಯಬೇಕೆಂದು ಇದೆಯೋ ಅಥವಾ ಇಲ್ಲಿಗೇ ಕೈಬಿಡಬೇಕೆಂದು ಇದೆಯೋ ?

ಶ್ರೀ ಎಚ್. ಸಿದ್ದವೀರಪ್ಪ.—ಈಗಿರತಕ್ಕ ಸ್ಥಿತಿಯಲ್ಲಿ ನಮ್ಮ ದೇಶದಲ್ಲಿ ಒಂದು ದಿವಸಕ್ಕೆ ಭದ್ರಾವತಿ ಫ್ಯಾಕ್ಟರಿಯಲ್ಲಿ 260 ಟನ್ ಪ್ರೊಡಕ್ಷನ್ ಆಗುತ್ತಾ ಇರುವುದು ತಮಗೆ ಗೊತ್ತಿದ್ದಹಾಗೆ ಮೊದಲಿಗಿಂತಲೂ ಇನ್ನೂ ಜಾಸ್ತಿಯಾಗಿದೆ. ಅದಕ್ಕೆ ಮಾರ್ಕೆಟ್ ಇದೆಯೇ ಇಲ್ಲವೇ ಎಂಬುದನ್ನು ನೋಡಿಕೊಂಡು ಮುಂದುವರಿಯುವುದು ಸರಿ ಎಂಬ ಒಂದು ಅಭಿಪ್ರಾಯ ಇದೆ. ಅದನ್ನು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಜಿ. ಬಸಪ್ಪ.—ಹಾಗಾದರೆ ಭದ್ರಾವತಿಯಲ್ಲಿ ಉತ್ಪನ್ನ ಆದ ಸ್ವಾತೇ ಹೆಚ್ಚಾಗುತ್ತದೆ, ಖರ್ಚಾಗುವುದಿಲ್ಲ ಎಂಬ ಅಭಿಪ್ರಾಯವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಉತ್ಪನ್ನವಾಗುವುದೂ ಖರ್ಚಾಗುತ್ತಾ ಇದೆ. ಆದರೆ ಇನ್ನೂ ಒಂದು ಪ್ಲಾಂಟ್ ಹಾಕಿದರೆ ಅಷ್ಟು consumptionಗೆ ಅವಕಾಶವಿದೆಯೇ, market facilities ಉಂಟೇ ಎಂಬುದನ್ನು ಯೋಚನೆ ಮಾಡಬೇಕು.

ಶ್ರೀ ಜಿ. ಬಸಪ್ಪ.—ಹೈದರಾಬಾದು ಮುಂತಾದ ಕಡೆಗಳಿಂದ ಡಿಮ್ಯಾಂಡ್ ಇದೆಯಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅಲ್ಲಿ ಪ್ರೊಡ್ಯೂಸ್ ಮಾಡತಕ್ಕದ್ದು ಕಡಮೆ ಆದಾಗ ತರಿಸಿಕೊಳ್ಳುತ್ತಾರೆ.

ಶ್ರೀ ಜಿ. ಬಸಪ್ಪ.—ಆ ರೀತಿ ಹೊರಗಡೆಯಿಂದ ಬರತಕ್ಕ ಡಿಮ್ಯಾಂಡಿಗೆ ಭದ್ರಾವತಿಯಲ್ಲಿ ಉತ್ಪನ್ನವಾಗತಕ್ಕ ಸಿಮೆಂಟು ಸಾಕಾಗುವುದಿಲ್ಲ ಎಂಬುದು ಗೊತ್ತಾಗುವುದಿಲ್ಲವೇ ?

ಶ್ರೀ ಎಚ್. ಸಿದ್ದವೀರಪ್ಪ.—ಅದು ಒಂದರಿಂದಲೇ ಆಗುವುದಿಲ್ಲ. ಒಂದೊಂದು ಸಾರಿ ಡಿಮ್ಯಾಂಡ್ ಬರುತ್ತದೆ. ಭದ್ರಾ, ನಾಗು ಈ ವರ್ಕ್ಸಗೆಲ್ಲಾ ಬೇಕಾಗುತ್ತದೆ. ಅದು ಸ್ಪೆಷಲ್ ಡಿಮ್ಯಾಂಡು. ಸ್ಪೆಷಲ್ ಡಿಮ್ಯಾಂಡಿಗೂ, ನಾರ್ಮಲ್ ಡಿಮ್ಯಾಂಡಿಗೂ ವ್ಯತ್ಯಾಸ ಇದೆ.

Sri A. BHEEMAPPA NAIK.—In view of this area being a scarcity area, at least to provide work for the people in times of scarcity, will the Government keep this in view and whenever there is need, will the Government think of this ?

Sri H. SIDDAVEERAPPA.—When the question of starting another plant in the said area comes up, this may be examined.

Sri S. SRINIVASA IYENGAR.—Will the Government be pleased to state whether the cement manufactured in Bhadravati is sub-standard to a little extent?

Sri H. SIDDAVEERAPPA.—I do not think that question arises out of this. I also say, in view of the importance of the question raised, Government have no report about it and I do not agree with regard to the suggestion made by the Hon'ble Member.

Sri S. SRINIVASA IYENGAR.—In that case, are Government aware that a complaint has been lodged by the All-India Cement Corporation?

Mr. SPEAKER.—That question does not arise.

Industries (Causes for Loss and Profit.)

Q.—766. Sri G. SIVAPPA (Holalkere).—

Will the Government be pleased to state:—

(*a*) what are the industries that are run on loss and causes for the loss?

(*b*) what are the industries that are run on profit and causes for the profit?

A.—Sri H. SIDDAVEERAPPA (Minister for Home and Industries).—

(*a*) (1) *The Mysore Implements Factory, Hassan.*—Due to high prices resulting from inadequate plant and machinery at the Factory and the keen competition from Tata's "AGRIND" mass production products on the one hand and Cottage Industry products on the other.

(2) *The Government Dichromate Factory, Belagula.*—Want of demand for the products in the market and competition from other manufacturers, surplus production and manufacture being confined to a single item in the factory. Proposals for the rationalisation of the industry by amalgamating it with the Mysore Chemicals and Fertilisers Ltd., have been sanctioned recently.

(3) *The Mysore Government Silk Filatures, Kanakapura.*—Due to slump in the market and consequent fall in demand and prices for Silk.

(*b*) 1 The Mysore Iron and Steel Works, Bhadravati.
2 The Government Electric Factory, Bangalore.
3 The Government Silk Weaving Factory, Mysore.
4 The Government Soap Factory, Bangalore.
5 The Central Industrial Workshop, Bangalore.
6 The Government Porcelain Factory, Bangalore
7 The Government Sandalwood Oil Factories, Mysore.

These concerns are working at a profit as there is a good market for their products, etc.

ಶ್ರೀ ಜಿ. ಶಿವಪ್ಪ.—ಮೂರು ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆಯೆಂದು ಹೇಳಿದ್ದೀರಿ. ಅದನ್ನು ತಡೆಗಟ್ಟಲು ಸರ್ಕಾರದವರು ಯಾವುದಾದರೂ ಕಾರ್ಯಕ್ರಮ ಕೈಕೊಂಡಿದ್ದೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಕೈಕೊಂಡಿದೆ.

ಶ್ರೀ ಜಿ. ಶಿವಪ್ಪ.—ಯಾವ ಯಾವುದೆಂದು ಹೇಳುವುದಕ್ಕೆ ಸಾಧ್ಯವೆ?

ಶ್ರೀ ಎಚ್. ಸಿದ್ದವೀರಪ್ಪ.—ಹಾಸನದ ಮೈಸೂರು ಹತ್ಯಾರುಗಳ ಕಾರ್ಖಾನೆಯಲ್ಲಿ ಒಂದು ಪ್ಲಾಂಟ್ ಹಾಕಿ ಬಾಕಿಕಡೆ ತಯಾರಾಗುವ ಮಾಲುಗಳಿಗನುಸಾರವಾಗಿ ಪ್ರೊಡಕ್ಷನ್ ಉತ್ತಮಪಡಿಸಬೇಕು ಎಂದು ಒಂದು ಸ್ಕೀಂ ಇದೆ. ಶೀಘ್ರವಾಗಿ ಕಾರ್ಯಕ್ರಮ ಕೈಕೊಳ್ಳುತ್ತೇವೆ. ಬೆಳಗೊಳದಲ್ಲರುವ ಡೈಕ್ರೋಮೇಟ್ ಕಾರ್ಖಾನೆಯನ್ನು ಮೈಸೂರು ಕೆಮಿಕಲ್ಸ್ ಮತ್ತು ಫರ್ಟಿಲೈಜರ್ಸ್ ಲಿಮಿಟೆಡ್ ಸಂಸ್ಥೆಗೆ ಸೇರಿಸಬೇಕೆಂದು ಆರ್ಡರಾಗಿದೆ. ಕನಕಪುರದ ಫಿಲೇಚರ್ ರೇಷ್ಮೆ ಕಾರ್ಖಾನೆಯಲ್ಲರುವ ಹಳೇ ಸ್ಟಾಕನ್ನು ಮುಗಿಸಬೇಕು ಎಂದು ಮಾಡಿದೆ. ಈ ವರ್ಷ ನಷ್ಟವಿಲ್ಲದೆ ಕೆಲಸ ನಡೆಯಬಹುದೆಂಬ ನಿರೀಕ್ಷಣೆಯಿದೆ.

ಶ್ರೀ ಜಿ. ಶಿವಪ್ಪ.—ಸಿಲ್ಕ್ ಫಿಲೇಚರ್ ಕಾರ್ಖಾನೆಯಲ್ಲಿ ಯಾವ ಕಾರ್ಯಕ್ರಮ ಹಾಕಿದರೂ ಲಾಭ ಬರುವ ರೀತಿಯಲ್ಲಿ ಕೆಲಸಮಾಡುವುದಕ್ಕಾಗುವುದಿಲ್ಲವೆಂದು ಟೆಕ್ನಿಕಲ್ ಒಪೀನಿಯನ್ನಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿಯಾಗಿ ಯಾರೂ ಅಭಿಪ್ರಾಯ ಕೊಟ್ಟಿಲ್ಲ.

ಶ್ರೀ ಜಿ. ಶಿವಪ್ಪ.—ತಮ್ಮಲ್ಲಿ ಬಹಳವಾಗಿ ಲಾಭ ಬರುವ ಕಡೆ ಅಕ್ಯೂಮುಲೇಷನ್ ಆಫ್ ಸ್ಟಾಕ್ಸ್ ಜಾಸ್ತಿಯೆಂಬುದು ಗೊತ್ತೆ?

ಶ್ರೀ ಎಚ್. ಸಿದ್ದವೀರಪ್ಪ.—ಒಂದೊಂದು ಸಲ ಇರುತ್ತದೆ, ಅದಕ್ಕೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಜಿ. ಶಿವಪ್ಪ.—ಈ ರೀತಿಯಾಗಿ ಕೆಲಸಮಾಡಿದರೆ ಸರ್ಕಾರಕ್ಕೆ ಲಾಭ ಹೆಚ್ಚಾಗಿ ಬರುತ್ತದೆಯೆ?